**ಕರ್ನಾಟಕ ಸರ್ಕಾರ**

ಕ್ರಮಾಂಕ : ಡಿಪಿಎಆರ್ 1 ಎಸ್.ಆರ್.ಸಿ 86(ಎ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 17-4-1986.

**ಸುತ್ತೋಲೆ**

ವಿಷಯ :- ಸರ್ಕಾರಿ ನೌಕರರ ರಹಸ್ಯ ವರದಿಯಲ್ಲಿ ಅವರು ಕನ್ನಡವನ್ನು ಆಡಳಿತದಲ್ಲಿ ಬಳಸುವ ಪರಿಣತಿಯನ್ನು ಸೂಚಿಸುವ ಬಗ್ಗೆ

ಉಲ್ಲೇಖ :- ಸುತ್ತೋಲೆ ಸಂಖ್ಯೆ ಡಿ.ಪಿ.ಎ.ಆರ್ 4 ಎಸ್.ಆರ್.ಸಿ 84, ದಿನಾಂಕ 4-7-1984

ಉಲ್ಲೇಖಿತ ಸುತ್ತೋಲೆಯಲ್ಲಿ ಸರ್ಕಾರಿ ನೌಕರರ ರಹಸ್ಯ ವರದಿಯನ್ನು ಬರೆಯುವಾಗ ಇಲಾಖಾ ಮುಖ್ಯಸ್ಥರು ಹಾಗೂ ಸಂಬಂಧಪಟ್ಟ ಇನ್ನಿತರ ಅಧಿಕಾರಿಗಳು ರಹಸ್ಯ ವರದಿಯಲ್ಲಿ ಕನ್ನಡ ಭಾಷೆಯನ್ನು ಆಡಳಿತದಲ್ಲಿ ಬಳಸುವ ಸಾಮರ್ಥ್ಯ ಹಾಗೂ ನಿಷ್ಠೆಯ ಬಗ್ಗೆ ಅಭಿಪ್ರಾಯವನ್ನು ಸೂಚಿಸಬೇಕೆಂದು ಮತ್ತು ಈ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ಕನ್ನಡ ಬಳಸುವ ಬಗ್ಗೆ ಸರ್ಕಾರದ ಧೋರಣೆಯಲ್ಲಿ ಯಾವುದೇ ಇಲಾಖೆಗಳಿಗೆ ಅಥವಾ ಸಂಸ್ಥೆಗಳಿಗೆ ಏನಾದರೂ ವಿನಾಯಿತಿ ಕೊಟ್ಟಿದ್ದಲ್ಲಿ ಅಥವಾ ಆ ಇಲಾಖಾ ಕಾರ್ಯಕ್ಷೇತ್ರದ ತಾಂತ್ರಿಕತೆಯ ಮಟ್ಟಕ್ಕನುಗುಣವಾಗಿರುವಂತೆ ಕನ್ನಡವನ್ನು ಬಳಸಲು ಸಾಧ್ಯವಾಗುವ ಶೀಘ್ರತೆಯನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಸೂಚಿಸಲಾಗಿತ್ತು.

2. ಆಡಳಿತದಲ್ಲಿ ಸಮಗ್ರ ಆಡಳಿತ ಭಾಷೆ ಕನ್ನಡವೆಂದು ಸರ್ಕಾರವು ಘೋಷಿಸಿರುವುದರಿಂದ ಯಾವುದೇ ಇಲಾಖೆ ಅಥವಾ ಸಂಸ್ಥೆಗೆ ಕನ್ನಡ ಬಳಸುವುದರಲ್ಲಿ ವಿನಾಯಿತಿ ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದುದರಿಂದ ದಿನಾಂಕ 4-7-84ರ ಸುತ್ತೋಲೆಯಲ್ಲಿ 2ನೇ ಕಂಡಿಕೆಯನ್ನು ತೆಗೆದುಹಾಕಲಾಗಿದೆ.

ಸಹಿ/-
**(ಎಂ. ಎಂ. ನಾಯ್ಕ್)**
ಸರ್ಕಾರದ ಸಹ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು)